# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 319 |
| ಸದಸ್ಯರ ಹೆಸರು | : | ಡಾ॥ ತೇಜಸ್ವಿನಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 14.12.2021. |
| ಉತ್ತರಿಸುವವರು | : | ಪೌರಾಡಳಿತ, ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ಯಮಗಳ ಸಚಿವರು. |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕೇಂದ್ರದ ಕೈಗಾರಿಕಾ ನೀತಿಯ ರಾಜ್ಯದಲ್ಲಿ ಸಣ್ಣ ಸಣ್ಣ ಕೈಗಾರಿಕೆಗಳ ಸ್ಥಾಪನೆಗೆ ಪೂರಕವಾಗಿದೆಯೇ; ಎಷ್ಟು ಸಣ್ಣ ಕೈಗಾರಿಕೆಗಳ ಸ್ಥಾಪನೆಯಾಗಿವೆ; ಗ್ರಾಮಾಂತರ ಭಾಗದಲ್ಲಿ ಪೂರಕ ವಾತಾವರಣ ಕಂಡು ಬಂದಿದೆಯೇ; ಉತ್ತಮ ಉದ್ಯೋಗಾವಕಾಶ ಸೃಷ್ಠಿಯಾಗಿದೆಯೇ, | ಕೇಂದ್ರ ಕೈಗಾರಿಕಾ ನೀತಿಯು ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳ ಸ್ಥಾಪನೆಗೆ ಪೂರಕವಾಗಿದೆ. ಕೇಂದ್ರ ಸರ್ಕಾರದ ಸಾರ್ವಜನಿಕ ಖರೀದಿ ನೀತಿ ಮಾದರಿಯಲ್ಲಿ ರಾಜ್ಯ ಸರ್ಕಾರ ಹೊಸ ಕೈಗಾರಿಕಾ ನೀತಿ 2020-25 ರಲ್ಲಿ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಿಗೆ ಟೆಂಡರ್‌ನಲ್ಲಿ ಭಾಗವಹಿಸಲು ಉಚಿತವಾಗಿ ಟೆಂಡರ್ ಫಾರಂಗಳನ್ನು ನೀಡಲು, ಇ.ಎಂ.ಡಿ ವಿನಾಯಿತಿ, 358 ಉತ್ಪನ್ನಗಳನ್ನು ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಿಂದಲೇ ಖರೀದಿಸಲು ಪ್ರೋತ್ಸಾಹಗಳನ್ನು ಅಳವಡಿಸಿ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಿಗೆ ವಿನಾಯಿತಿ/ ರಿಯಾಯಿತಿ ನೀಡಲಾಗಿದೆ.<br><br>ಕರ್ನಾಟಕ ರಾಜ್ಯದಲ್ಲಿ 30/6/2020 ರ ವರೆಗೆ 8,75,336 ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ಉದ್ಯೋಗ ಆಧಾರ್ ನೋಂದಣಿ ಪಡೆದಿರುತ್ತವೆ. ದಿನಾಂಕ 1/7/2020 ರಿಂದ 05/11/2021 ರ ವರೆಗೆ 3,35,636 ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ಉದ್ಯಮ್ ರಿಜಿಸ್ಟ್ರೇಷನ್ ನೊಂದಣಿ ಪಡೆದಿರುತ್ತವೆ.<br><br>ಗ್ರಾಮಾಂತರ ಭಾಗದಲ್ಲಿ ಪೂರಕ ವಾತಾವರಣವಿದ್ದು ಉತ್ತಮ ಉದ್ಯೋಗಾವಕಾಶ ಸೃಷ್ಠಿಯಾಗುತ್ತಿದೆ. |
| ಆ) | ಕೇಂದ್ರದ ಯೋಜನೆಗೆ (Start up) ಪ್ರತಿಕ್ರಿಯೆ ಹೇಗಿದೆ; ಎಷ್ಟು ಮಂದಿ ಫಲಾನುಭವಿಗಳು ಇದ್ದಾರೆ; ಮಹಿಳಾ ಸಮೂಹ ಎಷ್ಟು ಪ್ರಮಾಣದ ಸಣ್ಣ ಸಣ್ಣ ಕೈಗಾರಿಕೆಗಳ ಸ್ಥಾಪನೆಗೆ ಮುಂದೆ ಬಂದಿದೆ; ಇವರಿಗೆ ಯಾವ ರೀತಿಯ ವಿಶೇಷ ಪ್ರೋತ್ಸಾಹ ನೀಡಲಾಗಿದೆ? | ಕೇಂದ್ರದ ಯೋಜನೆಗೆ (Start up) ಸಂಬಂಧಿಸಿದಂತೆ ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯು ಈ ಯೋಜನೆಗೆ ಸಂಬಂಧಿಸಿದಂತೆ ಮಾಹಿತಿಯು ಲಭ್ಯವಿರುವುದಿಲ್ಲವೆಂದು ತಿಳಿಸಿರುತ್ತದೆ. |

ಸಿಐ 207 ಸಿಎಸ್‌ಸಿ 2021

(ಎನ್. ನಾಗರಾಜು (ಎಂ.ಟಿ.ಬಿ))
ಪೌರಾಡಳಿತ ಮತ್ತು ಸಣ್ಣ ಕೈಗಾರಿಕೆ
ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು.